ಸಾಕ್ಷಿಗೆ ಪುನಃ ಕರೆಯಿಸಿ ದಿಃ 20.11.2025 ಪ್ರಮಾಣ ವಚನ ಭೋಧಿಸಲಾಯಿತು.
ಮುದುವರೆದ ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

1. ನನ್ನ ಮೋಟಾರ ಸೈಕಲಗೆ ಡಿಕ್ಕಿ ಮಾಡಿದಂತಹ ಜೀಪಿನ ಭಾವಚಿತ್ರವನ್ನು ನೋಡುತ್ತಿದ್ದು ಸಾಕ್ಷಿದಾರರು ನಾಲ್ಕು ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು **ನಿ.ಪಿ.6 ರಿಂದ 9** ಎಂದು ಗುರುತಿಸಲಾಯಿತು.

ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ.ಜಿ.ಬಿ.ಆರ್. ವಕೀಲರಿಂದ

- ಪಾಟೀ ಸವಾಲಿಗಾಗಿ ಮುಂದುಡಲಾಗಿದೆ.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.

Form No.4 (Civil)
Deposition Sheets
(R.P.No.57)

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆ: 3/2017

ಪ್ರಾ.ಸಾ. 3 ಚಾ.ಸಾ 4

| | | |
|---|---|---|
| ಹೆಸರು | : | ಮಹಾದೇವಪ್ಪ |
| ತಂದೆಯ ಹೆಸರು | : | ಮಾಶಪ್ಪ |
| ವಯಸ್ಸು | : | 58 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ | : | ಚಪೇಟ್ಲಾ |

## ಪ್ರಮಾಣ ವಚನ ಭೋಧಿಸಿದ ದಿನಾಂಕ: 20-11-2025
## ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ಚಾಸಾ-1 ಮತ್ತು 5 ನನ್ನ ಮಕ್ಕಳಾಗಿರುತ್ತಾರೆ. 1 ನೇ ಆರೋಪಿ ನನ್ನ ಅಣ್ಣನಾಗಿರುತ್ತಾನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇರುತ್ತದೆ. ಸುಮಾರು 9 ವರ್ಷದಿಂದ 1 ನೇ ಆರೋಪಿ ಮತ್ತು ನನ್ನ ಮಕ್ಕಳು ನಾವು ಮತ್ತು ಚಂದ್ರಪ್ಪ ಒಂದೇ ಮನೆಯಲ್ಲಿ ಇದ್ದೇವು ನಮಗೆ ಚಂದ್ರಪ್ಪ ಮನೆ ಬಿಟ್ಟು ಹೋಗಿ ಎಂದು ಹೇಳಿದ್ದು ನಾವು ಎಲ್ಲಿಗೆ ಹೋಗಬೇಕು. ಹೊರಗಡೆ ಹೋಗಿ ಮನೆ ಕಟ್ಟಿಕೋಡು ಆದರೆ ನಮಗೆ ಹಣಕಾಸಿನ ಶಕ್ತಿ ಇರುವುದಿಲ್ಲ ಆಗಾಗಿ ಮನೆ ಕಟ್ಟಿಕೊಳ್ಳಲು ಆಗುವುದಿಲ್ಲ ಎಂದು ಹೇಳಿರುತ್ತೇವೆ. ಸುಮಾರು 9 ವರ್ಷಗಳ ಹಿಂದೆ ಸಂಜೆ 7.00 ಗಂಟೆ ಸುಮಾರು ಮನೆಯಲ್ಲಿ ನಮ್ಮೊಂದಿಗೆ 1 ನೇ ಆರೋಪಿ ಮತ್ತು ಆತನ ಮಕ್ಕಳು ಜಗಳವಾಡಿರುತ್ತಾರೆ. ಅಲ್ಲಿ ಇದ್ದರೆ ಜಗಳ ಆಗುತ್ತದೆ ಎಂದು ನಾವು ಗುರುಮಠಕಲ್ ಪೊಲೀಸ ಠಾಣೆಗೆ ನಾನು ನನ್ನ ಮಗ ಚಾಸಾ-1 ಮತ್ತು 5 ದ್ವಿಚಕ್ರವಾಹನದಲ್ಲಿ ಗುರುಮಠಕಲ್ ಪೊಲೀಸ ಠಾಣೆಗೆ ಹೋದೆವು. ಪಿ.ಎಸ್.ಐ ರವರ ಮುಂದೆ ನಾವು ರಾತ್ರಿ ಆದ

ಘಟನೆ ಬಗ್ಗೆ ಹೇಳಿರುವುದಿಲ್ಲ ಅದಕ್ಕೆ ಪಿ.ಎಸ್.ಐ ರವರು ನಾಳೇ ಬೆಳಿಗ್ಗೆ ಬನ್ನಿ ಅವರು ಚಂದ್ರಪ್ಪ ಮತ್ತು ಅವರ ಮಕ್ಕಳನ್ನು ಕರೆಯಿಸುತ್ತೇನೆ ಎಂದು ಹೇಳಿದರು. ನಂತರ ನಾನು ಚಾಸಾ-1 ಮತ್ತು 5 ರವರು ರಾತ್ರಿ 10.00 ಗಂಟೆಗೆ ಸುಮಾರು ಮರಳಿ ಮನೆಗೆ ಬರುತ್ತಿದ್ದಾಗ ನಮ್ಮ ಮನೆ ಒಂದು ಕಿ.ಮೀಟರ ಇದ್ದಾಗ ಆರೋಪಿ-1 ರಿಂದ 7 ರವರು  ಜೀಪಿನಲ್ಲಿ ಬಂದು ನಾವು ಹೋಗುತ್ತಿದ್ದನ್ನು ಕಾಯುತ್ತಾ ನೋಡಿ ಕುಳಿತ್ತಿದ್ದು, ನಾವು ಹೋಗಲು ಬರುತ್ತಿದ್ದಾಗ ನಮ್ಮನ್ನು ಹಿಂಬಾಲಿಸಿರುತ್ತಾರೆ. ಆಗ 1 ನೇಆರೋಪಿ ಬಡಿಗೆ ತೆಗೆದು ತಿರುವಲು ಪ್ರಾರಂಭಿಸಿದನು. ಬಸ ನಿಲ್ದಾಣದ ಹತ್ತಿರ ನಮ್ಮ ದ್ವಿಚಕ್ರವಾಹನಕ್ಕೆ ಡಿಕ್ಕಿ ಮಾಡಿ ಅಲ್ಲಿಂದ ಹೊಂಟು ಹೋಗಿರುತ್ತಾನೆ. ಆಗ ನಾವು ಬಾಜು ಬಿದ್ದಿರುತ್ತೇನೆ. ಅದರ ಪರಿಣಾಮ ನನ್ನ ಎಡಗಾಲು ಮುರಿಯುತ್ತದೆ ಮತ್ತು ಎಡಗೈಗೆ ಪೆಟ್ಟಾಗಿರುತ್ತದೆ. ಚಾಸಾ-5 ರವರಿಗೆ 3 ನೇ ಆರೋಪಿ ಕಾಲಿಗೆ ಹೊಡೆದಿರುತ್ತಾನೆ. ಘಟನೆ ಆಗುವ ಕಾಲಕ್ಕೆ ಚಾಸಾ-7 ಸಿದ್ದಪ್ಪ , ಚಾಸಾ-8 ನರಸಿಂಗ್, ಚಾಸಾ-9 ಸಹದೇವಪ್ಪ, ಚಾಸಾ-6 ಯಂಕಟಪ್ಪ ಇವರು ಇದ್ದರು. ಈ ನಾಲ್ಕು ಜನರು ಆಂಬುಲೆನ್ಸ ತರುಯಿಸಿ ನಮ್ಮನ್ನು ಗುರುಮಠಕಲ್ ಸರಕಾರಿ ಆಸ್ಪತ್ರೆಗೆ  ಕರೆದುಕೊಂಡು ಹೋಗಿ ಸೇರಿಸಿರುತ್ತಾರೆ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಜಿ.ಬಿ. ಆರ್. ವಕೀಲರಿಂದ</u>

2. ನಾವು ಐದು ಜನ ಅಣ್ಣತಮ್ಮಂದಿರು ಇರುತ್ತೇವೆ. ಮೊದಲೆದವರು ಸಾಬಣ್ಣ ನಂತರ ಮಾಣಿಕಪ್ಪ, ಚಂದ್ರಪ್ಪ, ನಾನು, ಸಿದ್ರಾಮಪ್ಪ ನಾವು ಐದು ಜನರು ಅಣ್ಣತಮ್ಮಂದಿರು 25 ವರ್ಷಗಳಿಂದ ಭಾಗ ಮಾಡಿಕೊಂಡಿರುತ್ತೇವೆ. ಮನೆ ಮತ್ತು ಹೊಲದಲ್ಲಿ ಭಾಗ ಮಾಡಿಕೊಂಡಿರುತ್ತೇವೆ. ನಮಗೆ ಹಿರಿಯರಿಂದ ಬಂದಂತಹ ಒಂದು ಮನೆ ಇರುತ್ತದೆ.  ಆ ಮನೆಯಲ್ಲಿ ಎಲ್ಲರಿಗೂ ಭಾಗವಾಗಿದ್ದು ಆದರೆ ಇಬ್ಬರೂ ಹೊರಗಡೆ ಇದ್ದು 3 ಜನ ಅದೇ ಮನೆಯಲ್ಲಿಇರುತ್ತೇವೆ. ಸಾಬಣ್ಣ ಮತ್ತು ಮಾಣಿಕಪ್ಪ ಇವರು ಹೊರಗಡೆ ಇರುತ್ತಾರೆ. ಸಾಬಣ್ಣ ಮತ್ತು ಮಾಣಿಕಪ್ಪ ಇವರ ಭಾಗಕ್ಕೆ ಬಂದಂತಹ

ಮನೆಯನ್ನು ನಾವು ಉಳಿದ ಮೂರು ಜನರು ತೆಗೆದುಕೊಂಡಿರುತ್ತೇವೆ. ನಾವು ಮೂರು ಜನ ಆ ಮನೆಯಲ್ಲಿ ಭಾಗ ಮಾಡಿಕೊಂಡು ಪ್ರತ್ಯೇಕವಾಗಿ ಇರುತ್ತೇವೆ. 25 ವರ್ಷಗಳಿಂದ ಯಾರಿಗೆ ಬಂದಂತಹ ಭಾಗದಲ್ಲಿ ಪ್ರತ್ಯೇಕವಾಗಿ ಇರುತ್ತೇವೆ ಎಂದರೆ ಸರಿ. ನಾವು ಐದು ಜನ ಅಣ್ಣತಮ್ಮಂದಿರಲ್ಲಿ 1 ನೇ ಆರೋಪಿ ಮಾತ್ರ ವಿಧ್ಯಾಭ್ಯಾಸ ಮಾಡಿರುತ್ತಾನೆ. ಆತ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದ. ಆ ಮನೆ ಹಳೆಯ ಮನೆಯಾಗಿದ್ದು ಅದನ್ನು ನನ್ನ ಸಹೋದರ ಚಂದ್ರಪ್ಪ ರಿಪೇರಿ ಮಾಡಿಸಿದ್ದನ್ನು ಎಂದರೆ ಸರಿ. ಆ ಮನೆಗೆ ಒಂದೇ ಮುಖ್ಯ ದ್ವಾರ ಇರುತ್ತದೆ. ಆ ಮುಖ್ಯದ್ವಾರದಿಂದ ಒಳಗಡೆ ಬಂದಾಗ ಅದರ ಒಳಗಡೆ ನಮಗೆ ಭಾಗ ಬಂದಿರುತ್ತದೆ ಅದರಲ್ಲಿ ನಾವು ಇರುತ್ತೇವೆ. ಸಿದ್ರಾಮಪ್ಪ ಹೊರಗಡೆ ಮನೆಗೆ ಬಾಗಿಲು ಮಾಡಿಕೊಂಡು ಇರುತ್ತಾನೆ ಎಂದರೆ ಸರಿ. ಈ ರೀತಿಯಾಗಿ ಭಾಗವಾಗಿದ್ದರಿಂದ ನಾವು ನಮಗೆ ಯಾವುದೆ ರೀತಿಯಾ ತೊಂದರೆ ಇರುವುದಿಲ್ಲ ಎಂದರೆ ಸರಿ. ಚಂದ್ರಪ್ಪ ಮಾಸ್ತರ ಇವರಿಗೆ ಬಂದಂತಹ ಭಾಗ ನಾನು ಉಳುಮೆ ಮಾಡುತ್ತಿದ್ದೆ ಎಂದರೆ ಸರಿ. ಸುಮಾರು 10-15 ವರ್ಷದಿಂದ ಭಾಗವನ್ನು ಸಾಗುವಳಿ ಮಾಡುತಿದ್ದೆ ಎಂದರೆ ಸರಿ. ನಂತರ ಚಂದ್ರಪ್ಪ ಮಾಸ್ತರ ಇವರು ನನ್ನನ್ನು ಜಮೀನು ಸಾಗುವಳಿ ಮಾಡುವುದನ್ನು ಬಿಡಿಸಿರುತ್ತಾನೆ. ಆ ರೀತಿ ನನ್ನನ್ನು ಬಿಡಿಸಿದ ಮೇಲೆ ಬೇರೆಯವರಿಗೆ ತನ್ನ ಜಮೀನನ್ನು ಪಾಲಿಗೆ ಕೊಟ್ಟಿದ್ದನು. ನಾನು ಚಂದ್ರಪ್ಪ ಇವರ ಜಮೀನನ್ನು ಪಾಲಿಗೆ ಮಾಡುತ್ತಿದ್ದಾಗ ಸರಿಯಾಗಿ ಭಾಗ ಕೊಡದೆ ಆತನಿಗೆ ಕಿರಿಕಿರಿ ಮಾಡಿಕೊಳ್ಳುತ್ತಿದ್ದೇನು ಎಂದರೆ ಸರಿ ಯಲ್ಲ. ಆಗಾಗಿ ಚಂದ್ರಪ್ಪ ಮತ್ತು ನನ್ನ ನಡುವೆ ಜಗಳ ಆಗುತ್ತಿತ್ತು ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ಮನೆಯ ಸಲುವಾಗಿ ಜಗಳ ಆಗುತ್ತಿತ್ತು ಎಂದು ನುಡಿಯುತ್ತಾರೆ.

3. ದಿಃ 05.06.2016 ರಂದು ರಾತ್ರಿ 7.00 ಗಂಟೆಗೆ ನಾನು ಮತ್ತು ನನ್ನ ಮಕ್ಕಳು ಸೇರಿ 4 ನೇ ಆರೋಪಿಯೊಂದಿಗೆ ಜಗಳ ಮಾಡಿರುತ್ತೇವೆ ಎಂದರೆ ಸರಿ.

ಆಗ 1 ನೇ ಆರೋಪಿ ಏಕೆ ಜಗಳ ಆಡುತ್ತೀರಿ ಎಂದು ಕೇಳಿರುತ್ತಾರೆ ಎನ್ನುವುದಕ್ಕೆ ಸಾಕ್ಷಿದಾರರು 1 ನೇ ಆರೋಪಿ ಬಂದು ನನ್ನ ಹಿರಿಯ ಮಗನಾದ ಮೊಗಲಪ್ಪನಿಗೆ ಹೊಡೆದಿರುತ್ತಾನೆ ಎಂದು ಸ್ವತಃ ನುಡಿದಿರುತ್ತಾರೆ. 1 ನೇ ಆರೋಪಿ ನನ್ನ ಹಿರಿಯ ಮಗನಿಗೆ ಹೊಡೆದಿರುತ್ತಾರೆ ಎಂದು ಇಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ಇವರು 1 ನೇ ಆರೋಪಿ ಒಣಕೆ ತೆಗೆದುಕೊಂಡು ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ-1 ಒಣಕೆಯಿಂದ 1 ನೇ ಆರೋಪಿಗೆ ಹೊಡೆದಿರುತ್ತಾನೆ ಮತ್ತು ನಾನು ಕಟ್ಟಿಗೆಯಿಂದ ಹೊಡೆದಿತ್ತೇನೆ ಎಂದರೆ ಸರಿಯಲ್ಲ. ಆ ದಿನ ನಾವು ಮೂರು ಜನ 4 ನೇ ಆರೋಪಿಗೆ ಹೊಡೆದಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮಗ ಒಣಕೆಯಿಂದ 1 ನೇ ಆರೋಪಿಗೆ ಹೊಡೆದಿರುತ್ತಾನೆ ಪರಿಣಾಮ ಆತನ ತಲೆಗೆ ರಕ್ತಗಾಯವಾಗಿ ಪ್ರಜ್ಞ್ನ ತಪ್ಪಿರುತ್ತಾನೆ. ಈ ರೀತಿ ಆದ ಮೇಲೆ 1 ನೇ ಆರೋಪಿ ಆಂಬುಲೆನ್ಸನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾನೆ ಎಂದರೆ ಸರಿಯಲ್ಲ. ಒಣಕೆಯಿಂದ ಹೊಡೆದಿದ್ದರಿಂದ ತೀವ್ರ ಸ್ವರೂಪದ ಗಾಯವಾಗಿಹಿದ್ದು ಆತನನ್ನು ಗುರುಮಠಕಲ್ ಆಸ್ಪತ್ರೆಯಲ್ಲಿ ಆಡ್ಮಿಟ್ ಮಾಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆತನಿಗೆ ತೀವ್ರ ಸ್ವರೂಪದ ಗಾಯವಾಗಿದ್ದರಿಂದ ನಾನು ಮತ್ತು ನನ್ನ ಮಕ್ಕಳು ಗುರುಮಠಕಲ್ ಪೊಲೀಸ ಠಾಣೆಗೆ ಹೋಗಿದ್ದೇವು. ಆಗ ಪೊಲೀಸರು ವಿಚಾರಣೆ ಮಾಡಿದ್ದು, 1 ನೇ ಆರೋಪಿಯ ಸ್ಥಿತಿ ಚಿಂತಜನಾಕವಾಗಿರುತ್ತದೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಗುರುಮಠಕಲ್ ಆಸ್ಪತ್ರೆಯಲ್ಲಿ ಎಮ್.ಎಲ್.ಸಿ ಸಹ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಗೆ ಪ್ರಥಮ ಚಿಕಿತ್ಸೆ ಕೊಟ್ಟು ಕಲಬುರಗಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಕಲಬುರಗಿಯಲ್ಲಿ 1 ನೇ ಆರೋಪಿ ಆಡ್ಮಿಟ ಆಗಿರುತ್ತಾನೆ ಎಂದರೆ ಸರಿಯಲ್ಲ. ನಾವೇ ಸರಕಾರಿ ಆಸ್ಪತ್ರೆಯಲ್ಲಿ ಇದ್ದೇವು ಆಗಾಗಿ 1 ನೇ ಆರೋಪಿ ಯಾವ ಆಸ್ಪತ್ರೆಯಲ್ಲಿ ಇದ್ದ ಎಂದು ನೋಡಿಲ್ಲ ಎಂದು ನುಡಿಯುತ್ತಾರೆ. 1 ನೇ

ಆರೋಪಿಯ ಹೆಸರು ದೇವಮ್ಮ ಎಂದು ಇರುತ್ತದೆ ಎನ್ನುವುದಕ್ಕೆ ಸಾಕ್ಷಿದಾರರು ಆಕೆಯು ಚಂದ್ರಪ್ಪನ ಎರಡನೇ ಹೆಂಡತಿ ಎಂದು ಇರುತ್ತದೆ ಎಂದು ನುಡಿಯುತ್ತಾರೆ. ದೇವಮ್ಮನಿಗೆ ನಾಲ್ಕು ಜನ ಮಕ್ಕಳು ಇರುತ್ತಾರೆ ಎಂದರೆ ಸರಿ. ಸುಲೋಚನ ಇವರಿಗೆ ಅನೇಕ ವರ್ಷಗಳಿಂದ ಅವರ ಕೈಕಾಲು ಬಿದ್ದಿದ್ದವು ಎಂದರೆ ಸರಿ. ಸುಲೋಚನ ಆರೋಗ್ಯ ಸರಿ ಇರಲಿಲ್ಲ ಆಗಾಗಿ ದೇವಮ್ಮ ಇವರನ್ನು ಮದುವೆ ಆಗಿದ್ದನು ಎಂದರೆ ಸರಿ.

4. ಚಾಸಾ-1 ಇವರು ಯಾವುದೇ ಕೆಲಸ ಮಾಡುವುದಿಲ್ಲ ಶಾಲೆಗೆ ಹೋಗುತ್ತಿದ್ದ. ಈ ಕೇಸು ಆಗುವ ಮೊದಲು ಚಾಸಾ-1 ವಿಧ್ಯಾರ್ಥಿ ಆಗಿದ್ದರು ಆ ಕೇಸು ಆದ ಮೇಲೆ ಆ ಕಡೆ ಇ ಕಡೆ ಓಡಾಡು ಕೊಂಡು ಇರುತ್ತಾನೆ. ಹೋಂ ಗಾರ್ಡ ಆಗಿ ಇರುತ್ತಾನೆ ಎಂದರೆ ಸರಿ. ನನ್ನ ಮಗ ಹೋಂ ಗಾರ್ಡ ಆಗಿರುವುದರಿಂದ ಆರೋಪಿತರು ನಮ್ಮ ಮೇಲೆ ದೊಡ್ಡ ಕೇಸು ಮಾಡುತ್ತಾರೆ ಎಂದು ಆಗಾಗಿ ನಾವು ಈ ಕೇಸು ಮಾಡಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಆರೋಪಿಯ ಸ್ಥಿತಿ ಚಿಂತಜನಾಕವಾಗಿತ್ತು ಇಂದು ಅಥವಾ ನಾಳೆ ಮೃತ ಪಡುವ ಸ್ಥಿತಿಯಲ್ಲಿ ಇರುತ್ತಾನೆ ಎಂದು ನಾನು ನನ್ನ ಮಗ ಚಾಸಾ-1 ಮತ್ತು 5 ಸೇರಿಕೊಂಡು 2 ನೇ ಆರೋಪಿಯ ವಿರುದ್ಧ ಗುನ್ನೆ ಸಂಖ್ಯೆ 79/2016 ಆಗಾಗಿ ಆತನ ಮೇಲೆ ಭಾರತ ದಂಡ ಸಂಹಿತೆ ಕಲಂ.279, 338 ರಡಿಯಲ್ಲಿ ಕೇಸು ಹಾಕಿದ್ದರು ಎಂದರೆ ಸರಿಯಲ್ಲ. ಜಆಗಾಗಿ ದಿಃ 07.06.2016 ರಂದು 1 ನೇ ಆರೋಪಿ ಮೃತ ಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ ನಾವು ಆಸ್ಪತ್ರೆಯಲ್ಲಿ ಆಡ್ಮಿಮ ಆಗಿದ್ದೇವು ಎಂದು ನುಡಿಯುತ್ತಾರೆ. ನಾವು ಯಾವುದೇ ಆಸ್ಪತ್ರೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆಗಾಗಿ ದಿಃ 05.06.2016 ರಂದು ಪೊಲೀಸರು 1 ನೇ ಆರೋಪಿ ಇರುವಂತಹ ಆಸ್ಪತ್ರೆಗೆ ಹೋಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಆಗಾಗಿ ದಿಃ 06.06.2016 ರಂದು ಬೆಳಿಗ್ಗೆ 6.00 ಗಂಟೆಗೆ ದೇವಮ್ಮಳಿಂದ ದೂರು ಪಡೆದುಕೊಂಡಿರುತ್ತಾರೆ ಎಂದರೆ

ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ಎಲ್ಲ ವಿಷಯ ಗೊತ್ತಿದ್ದರು ಸಹ ನನಗೆ ಗೊತ್ತಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ ಪೊಲೀಸರು ಏನು ಆಯಿತು ಎಂದು ವಿಚಾರಿಸಿದಾಗ ದೇವಮ್ಮ ಇವರು ನಾವು ಚಂದ್ರಪ್ಪನಿಗೆ ಒಣಕೆಯಿಂದ ಹೊಡೆದಿರುವುದನ್ನು ಸಂಪೂರ್ಣವಾಗಿ ಹೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಆ ವಿಷಯ ನನಗೂ ಮತ್ತು ನನ್ನ ಮಕ್ಕಳಿಗೂ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ನನ್ನ ಮಗ ಪ್ರಭಾವ ಬೀರಿ ದೂರಿನ್ನು ಹರಿದು ಹಾಕಿ ಭಾಾರತ ದಂಡ ಸಂಹಿತೆ ಕಲಂ.304(ಎ) ರಡಿಯಲ್ಲಿ ಕೇಸು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಕಲು ಸಹಿ ಮಾಡಿ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಆಗಾಗಿ ನಾವು ಆರೋಪಿತರ ಮೇಲೆ ಕೇಸು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮೇಲೆ ಮರ್ಡರ ಕೇಸು ಆಗುತ್ತದೆ ಎನ್ನುವ ಉದ್ದೇಶದಿಂದ ಆರೋಪಿತರು ನಮಗೆ ಜೀಪಿನಿಂದ ಡಿಕ್ಕಿ ಮಾಡಿರುತ್ತಾರೆ ಎಂದು ಈ ಕೇಸು ಸೃಷ್ಟಿ ಹಾಕಿರು ತ್ತೇವೆ ಎಂದರೆ ಸರಿಯಲ್ಲ. 1 ನೇ ಆರೋಪಿಯ ಸ್ಥಿತಿ ಚಿಂತಜನಾಕವಾಗಿರುತ್ತದೆ ಎಂದು ಆರೋಪಿ 2 ರಿಂದ 7 ಇವರು 1ನೇ ಆರೋಪಿಗೆ ಸಹಾಯ ಮಾಡಿರುತ್ತಾರೆ ಎಂದು ಅವರನ್ನು ಈ ಕೇಸಿನಲ್ಲಿ ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ಅದೇ ಕಾರಣದಿಂದಾಗಿ 3ನೇ ಆರೋಪಿ ಮೃತಪಟ್ಟಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಮಗ ಆರೋಪಿತರ ಮೇಲೆ ಇನ್ನೊಂದು ಕೇಸು ಸಹ ಮಾಡಿರುತ್ತಾನೆ ಎಂದರೆ ಸರಿ. 1ನೇ ಆರೋಪಿಯ ಚಂದ್ರಪ್ಪನ ಆಸ್ತಿ ನುಂಗಬೇಕೆಂದು ಆರೋಪಿತರಿಗೆ ತೊಂದರೆ ಕೊಡುವುದಕ್ಕಾಗಿ ಈ ಕೇಸನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರು ಸರಿಯಾದ ಭಾಗ ಮಾಡಿಕೊಂಡಿದ್ದೇವೆ ಆ ಪ್ರಕಾರ ನಡೆದುಕೊಳ್ಳೋಣ ಎಂದು ಆರೋಪಿತರ ಮೇಲೆ ದ್ವೇಷ ಸಾಧಿಸುವುದಕ್ಕಾಗಿ ಈಕೇಸು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆ ಪ್ರಕಾರ ನಾನು, ಚಂದ್ರಪ್ಪನ ಹೆಂಡತಿ ದೇವಮ್ಮ ಮತ್ತು ಆಕೆಯ ಮಕ್ಕಳಿಗೆ ಸಿವಿಲ್ ವ್ಯಾಜ್ಯಾ ಸಂಖ್ಯೆ 193/2022 ಎಂದು ಸಿವಿಲ್ ನ್ಯಾಯಾಲಯ,

ಯಾದಗಿರಿಯಲ್ಲಿ ಕೇಸು ಮಾಡಿರುತ್ತೇವೆ ಎಂದರೆ ಸರಿಯಲ್ಲ. O.S No.193/2022 ನ್ನು ಹಿಂಪಡೆದು ಅದೇ ಆಸ್ತಿಗೆ ಸಂಬಂಧಿಸಿದಂತೆ ಇನ್ನೊಂದು ಸಿವಿಲ್ ವ್ಯಾಜ್ಯಾ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸರ್ವೆ 415 ರಲ್ಲಿ ಸಂಬಂಧಿಸಿದಂತೆ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಆ ಸರ್ವೆ ನಂಬರ 415 ಗಾಜರಕೋಟ ಸೀಮೆಯಲ್ಲಿ ಬರುತ್ತದೆ ಎಂದರೆ ಸರಿ. ಆ ಕೇಸು ವಜಾಗೊಂಡ ಮೇಲೆ ಇನ್ನೊಂದು ಕೇಸು O.S.No.89/2025 ನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಚಂದ್ರಪ್ಪನ ಹೆಂಡತಿ ದೇವಮ್ಮ ಮತ್ತು ಅವರ ಮಕ್ಕಳಿಗೆ ತೊಂದರೆ ಕೋಡಬೇಕು ಎಂಬ ಉದ್ದೇಶದಿಂದ ಈ ಎಲ್ಲ ಕೇಸು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಮಕ್ಕಳಾದ ಚಾಸಾ-1 ಸಾಬಪ್ಪ ನನ್ನ ಸ್ವಂತ ಮಗನಾಗಿರುತ್ತಾನೆ ಮತ್ತು ಚಾಸಾ- 5 ಒಟ್ಟಿಗೆ ಒಂದೇ ಮನೆಯಲ್ಲಿ ಇರುತ್ತೇವೆ. ಅದೇ ರೀತಿಯಾಗಿ ಚಾಸಾ-1 ಇವರು 29 ಜನರ ಮೇಲೆ ಸಿವಿಲ ದಾವೆ O.S.No.101/2025 ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. O.S.No.101/2025 ರಲ್ಲಿ ನಾನು, ನನ್ನ ಮಗಳು ಸುಜಾತ, ಚಾಸಾ-5 ಪಕ್ಷಕಾರರು ಆಗಿರುತ್ತೆವೆ ಮತ್ತು ನ್ಯಾಯಾಲಯದಿಂದ ಸಮನ್ಸ ಬಂದಿರುತ್ತದೆ. ನಾನು ಮತ್ತು ನನ್ನ ಮಗ ಚಾಸಾ-1 ಸೇರಿಕೊಂಡು ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಕೇಸನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಮೋಟಾರ ಸೈಕಲ್ ಹಿಂಭಾಗ ಬಂದು ಡಿಕ್ಕಿ ಮಾಡಿರುತ್ತಾನೆ. ಆ ರೀತಿ ಯಾವುದೇ ಡಿಕ್ಕಿ ಆಗಿರುವುದಿಲ್ಲ ಮರ್ಡರ ಕೇಸು ನಮ್ಮ ಮೇಲೆ ಬರುತ್ತದೆ ಎಂದು ಹೋಗುತ್ತಿದ್ದ ದ್ವಿಚಕ್ರ ವಾಹನಕ್ಕೆ ಜೀಪು ಬಂದು ಡಿಕ್ಕಿ ಮಾಡಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೋಟಾರ ಸೈಕಲ್ನ ಹಿಂದುಗಡೆ ಜೀಪು ಬಂದು ಡಿಕ್ಕಿ ಮಾಡಿದರೆ ಮೋಟಾರ ಸೈಕಲನ ಹಿಂಭಾಗ ಜಕ್ಕಂ ಗೊಳ್ಳುತ್ತದೆ ಸಾಕ್ಷಿಯು ತುಂಬಾ ಜಕ್ಕಮ ಗೊಂಡಿರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈ ನಿ.ಪಿ.2 ನ್ನು ತೋರಿಸಿ ಹಿಂದುಗಡೆ ಏನಾದರೂ ಜಕ್ಕಮ ಆಗಿದೆ ಎಂದರೆ ಸಾಕ್ಷಿದಾರರು

ಮುಂದೆ ಜಕ್ಕಮ ಆಗಿರುತ್ತದೆ ಎಂದು ನುಡಿಯುತ್ತಾರೆ. ಈ ಕೇಸು ಮಾಡುವುದಕ್ಕಾಗಿ ದ್ವಿಚಕ್ರದ ವಾಹನಕ್ಕೆ ಹೊಡೆದು ಆರೋಪಿತರು ಜೀಪು ತೆಗದುಕೊಂಡು ಬಂದು ಹಿಂದೆ ಡಿಕ್ಕಿ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಜೀಪು ಕಮಾಂಡರ ಜೀಪು ಆಗಿತ್ತು ಆದರೆ ಅದರ ನಂಬರ ನನಗೆ ಹೇಳಲು ಬರುವುದಿಲ್ಲ. ಆ ಜೀಪನ್ನು ನಾನು ನೋಡಿರುತ್ತೇನೆ. ಕಮಾಂಡರ ಜೀಪ ಉದ್ದಕ್ಕೆ ಇರುತ್ತದೆ ಎಂದರೆ ಸರಿ. ಆ ಜೀಪಿನಲ್ಲಿ ಚಾಲಕನನ್ನು ಒಳಗೊಂಡಂತೆ 9 ಜನರು ಹೋಗಬಹುದು. ಆ ಜೀಪಿನ ಹಿಂದುಗಡೆ ನಾಲ್ಕು ಜನ, ನಡುವೆ ನಾಲ್ಕು ಜನ, ಮುಂದೆ ಚಾಲಕನನ್ನುಒಳಗೊಂಡಂತೆ ಮೂರು ಜನರು ಹೋಗಲು ಅವಕಾಶ ಇರುತ್ತದೆ ಎಂದರೆ ಸರಿ. ನಿ.ಪಿ.6 ರಿಂದ 9 ಕಮಾಂಡರ ಜೀಪು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಈ ಕೇಸಿನ ಅನುಕೂಲವಾಗಲೆಂದು ನಾವು ಮತ್ತು ಪೊಲೀಸರು ಸೇರಿ ನಿ.ಪಿ.6 ರಿಂದ 9 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಜೀಪಿನಿಂದ ಡಿಕ್ಕಿ ಮಾಡಿದ ಮೇಲೆ ನಾವು ಕೆಳಗಡೆ ಬಿದ್ದಿರುತ್ತೇವೆ ಮತ್ತು ಕಟ್ಟಿಗೆ, ಕೊಡಲಿಯಿಂದ ಹೊಡೆದಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇ ಎಂದರೆ ಸರಿಯಲ್ಲ. ಅದೇ ದಿನ 11.00-12.00 ಗಂಟೆಗೆ ಪೊಲೀಸರು ನನ್ನ ಹೇಳಿಕೆ ಪಡೆದುಕೊಂಡಿದ್ದಾರೆ. ಆ ದಿನ ಹೊಡೆದಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇ ಎಂದರೆ ಸರಿಯಲ್ಲ. ಆ ದಿನ ಆಗಾಗಿ 1 ನೇಆರೋಪಿ ಆ ಜೀಪಿನಲ್ಲಿ ಇರಲಿಲ್ಲ ಆ ಜೀಪು ಇರಲಿಲ್ಲ ಮತ್ತು ಅಂತಾ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆ ಚಂದ್ರಪ್ಪನ ಸ್ಥಿತಿ ನೋಡಿ ನಾನು, ನನ್ನ ಮಗ, ಪೊಲೀಸರು ಸೇರಿ ಈ ಕೇಸು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಅದೇ ರೀತಿಯಾಗಿ ಗಾಯದ ಪ್ರಮಾಣದ ಪತ್ರ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆ ಪ್ರಕಾರ ಚಾಸಾ-6 ರಿಂದ 10 ರವರ ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.